E) Yes. But at present, it is not in existence.

Statement showing the Location of the Vidyapeethas in the State

1 Nanjangud Vidyapeetha for Ladies in Mysore District.
2 Shivaraguda Vidyapeetha, Maddur Tq. in Mandya District.
3 Kengeri Vidyapeetha for Ladies in Bangalore.
4 Basavakalyan Vidyapeetha at Bidar District.
5 Kathavai Vidyapeetha at Chitradurga District.
6 Venigadale Vidyapeetha at Chintamani Tq. Kolar District.
7 Tunga Vidyapeetha at Gaganoor Tq., Shimoga District.
8 Vidyapeetha at Sirsi, Uttara Kannada District.
9 Negalur Vidyapeetha at Hirekerur, Dharwad District.
10 Bunuanala Vidyapeetha at Bijapur District.
11 Yagaji Vidyapeetha at Hassan District
12 Pampa Vidyapeetha at Hospet Tq. Bellary District.
13 Kaveri Vidyapeetha at Malavalli for Ladies, Mandya District.
14 Chara Vidyapeetha at Karkala Tq. Dhakshina Kannada District.

ರೈತರು ಮತ್ತು ಕಾರ್ಮಿಕರುಗಳ ಕ್ಷೇಮಾಭಿವೃದ್ಧಿ ಬಗ್ಗೆ

೮೨೨. ಶ್ರೀ ಬಿ. ಗಂಗಣ್ಣ (ಕಳ್ಳಂಬೆಳ್ಳ).—ಮಾನ್ಯ ಕೃಷಿ ಮತ್ತು ತೋಟಗಾರಿಕೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕಳೆದ ಮೂರು ವರ್ಷಗಳಲ್ಲಿ ಪ್ರತಿ ಜಿಲ್ಲೆಯಲ್ಲೂ ವರ್ಷ ಪ್ರತಿ ಬಿದ್ದಿರುವ ಮಳೆ ಪ್ರಮಾಣ ವೆಷ್ಟು,

ಆ) ಮಳೆ ಪ್ರಮಾಣಕ್ಕೆ ಅನುಸಾರವಾಗಿ ಪ್ರತಿ ಜಿಲ್ಲೆಯಲ್ಲೂ ರೈತರುಗಳಿಂದ ಉತ್ಪಾದಿಸಿರುವ ಖುಷ್ಕಿ ಮತ್ತು ನೀರಾವರಿ ಬೆಳೆಗಳ ಪ್ರಮಾಣವೆಷ್ಟು,

ಇ) ಮೇಲ್ಕಂಡ ಅಂಕಿ ಅಂಶಗಳ ಆಧಾರದ ಮೇರೆಗೆ ರೈತರ ಮತ್ತು ರೈತ ಕಾರ್ಮಿಕರ ಆರ್ಥಿಕ ಮತ್ತು ಕ್ಷೇಮಾಭಿವೃದ್ಧಿಗಳು ವೃದ್ಧಿಸಲ್ಪಟ್ಟಿರುತ್ತವೆಯೇ ಅಥವಾ ಕ್ಷೀಣಿಸಲ್ಪಟ್ಟಿರುತ್ತವೆಯೆ,

ಈ) ಕೈಗಾರಿಕಾ ಕ್ಷೇತ್ರದಲ್ಲಿ ರೋಗಗ್ರಸ್ಥ ಕೈಗಾರಿಕೋದ್ಯಮಿಗಳಿಗೆ ಸಹಾಯ ನೀಡುವ ರೀತಿಯಲ್ಲೇ ಕೃಷಿಕರಿಗೆ ಮತ್ತು ಕೃಷಿ ಕಾರ್ಮಿಕರಿಗೆ ಸಹಾಯ ಮತ್ತು ಸೌಲಭ್ಯಗಳನ್ನು ನೀಡಲಾಗುತ್ತಿಲ್ಲ.

ಉ) ಇನ್ನು ಮುಂದೆಯಾದರೂ ಕೈಗಾರಿಕಾ ಕ್ಷೇತ್ರ ಮತ್ತು ಕೃಷಿ ಕ್ಷೇತ್ರಗಳನ್ನು ಸಮಾನಾಂತರವಾಗಿ ಪರಿಗಣಿಸಿ ರೈತರು ಪ್ರಕೃತಿ ವಿಕೋಪಕ್ಕೊಳಪಟ್ಟರೆ ಸಮಾನ ಸೌಲಭ್ಯ ಮತ್ತು ಸಹಾಯಗಳನ್ನು ಒದಗಿಸಲಾಗುವುದೇ ?

ಶ್ರೀ ಬಸವರಾಜ್ ಪಟೇಲ್ ಅನ್ವರಿ (ಕೃಷಿ ಮತ್ತು ತೋಟಗಾರಿಕೆ ರಾಜ್ಯ ಸಚಿವರು).—

ಅ) ವಿವರಗಳನ್ನು ತಃಖ್ತೆ ' ಎ ' ನಲ್ಲಿ ಒದಗಿಸಲಾಗಿದೆ.

ಆ) ಜಿಲ್ಲಾವಾರು ಖುಷ್ಕಿ ಮತ್ತು ನೀರಾವರಿ ಬೆಳೆಗಳ ಉತ್ಪಾದನೆಯ ವಿವರಗಳು ಪ್ರತ್ಯೇಕವಾಗಿ ದೊರೆಯುವುದಿಲ್ಲ. ಎರಡನ್ನು ಸೇರಿಸಿದ ವಿವರಗಳನ್ನು ಸದನದ ಮೇಜಿನ ಮೇಲೆ ಇಡಲಾಗಿದೆ. (ತಃಖ್ತೆ ' ಬಿ')

ಇ) ರೈತರ ಮತ್ತು ರೈತ ಕಾರ್ಮಿಕರ ಆರ್ಥಿಕ ಸ್ಥಿತಿಯು ಹವಾಮಾನ ಪರಿಸ್ಥಿತಿ ಮತ್ತು ಕೃಷಿ ಉತ್ಪಾದನೆಯ ಮೇಲೆ ಅವಲಂಬಿತವಾಗಿರುತ್ತದೆ. ಕೃಷಿ ಉತ್ಪಾದನೆಯು ಚೆನ್ನಾಗಿದ್ದ ವರ್ಷಗಳಲ್ಲಿ ಇವರ ಸ್ಥಿತಿಯು ಸಮಾಧಾನಕರ ಮಟ್ಟದಲ್ಲಿರುತ್ತದೆ. ಹಾಗೆಯೇ, ಕೃಷಿ ಉತ್ಪಾದನೆ ಕಡಿಮೆಯಾದಾಗ, ಇದರ ವರಮಾನವು ಕಡಿಮೆಯಾಗುವುದು ಸಹಜ. ಕೃಷಿ ಕಾರ್ಮಿಕರಿಗೆ ಅಭಾವ ಪರಿಸ್ಥಿತಿಯಲ್ಲಿ ಉದ್ಯೋಗ ಸಿಗುವಂತಹ ಕಾಮಗಾರಿಗಳು ವಿಶೇಷವಾಗಿ ಏರ್ಪಾಡು ಮಾಡಿರುವುದರಿಂದ ಅವರು ಅನುಕೂಲ ಪಡೆಯುವರು.

ಈ) i) ಬೆಳೆಗಳು ಪ್ರಕೃತಿ ವಿಕೋಪ ಹಾಗೆಯೇ ರೋಗರುಜಿನಗಳ ಭಾದೆಯಿಂದ ನಷ್ಟವಾದರೆ ಕೃಷಿಕರುರೆ ಈಗ ಜಾರಿಯಲ್ಲಿರುವ ಬೆಳೆ ವಿಮಾ ಯೋಜನೆಯಿಂದ ಪರಿಹಾರ ಪಡೆಯ ಬಹುದು.

ii) ಆಶಾಕಿರಣ ಯೋಜನೆಯಲ್ಲಿ ರೈತ ಕಾರ್ಮಿಕರಿಗೆ ಈ ಕೆಳಕಂಡಂತೆ ಪರಿಹಾರಗಳನು ನೀಡಲಾಗುತ್ತಿದೆ.

೧) ಅಪಘಾತದಲ್ಲಿ ಮರಣ ಹೊಂದಿದರೆ ರೂ. ೨,೦೦೦-೦೦

೨) ಅಪಘಾತದಿಂದ ಎರಡು ಕೈ ಕಾಲು, ಎರಡು ಕಣ್ಣು ಅಥವಾ ಒಂದು ಕೈಕಾಲು ಮತ್ತು ಒಂದು ಕಣ್ಣನ್ನು ಕಳೆದು ಕೊಂಡರೆ ರೂ.೨,೦೦೦-೦೦

೩) ಅಪಘಾತದಿಂದ ಒಂದು ಕೈಕಾಲು ಅಥವಾ ಒಂದು ಕಣ್ಣನ್ನು ಕಳೆದುಕೊಂಡರೆ ರೂ. ೧,೦೦೦-೦೦

ಬಿ) ಭೂರಹಿತ ಕೃಷಿ ಸ್ತ್ರೀ ಕಾರ್ಮಿಕರಿಗೆ ಹೆರಿಗೆ ಭತ್ಯವನ್ನು ತಿಂಗಳಿಗೆ ೧೦೦ ರೂ. ಗಳಂತೆ ಮೂರು ತಿಂಗಳಿಗೆ ಒಂದೇ ಕಂತಿನಲ್ಲಿ ಹೆರಿಗೆಗೆ ಮುಂಚೆ ಕೊಡಲಾಗುವುದು.

iii) ಸರ್ಕಾರ ರೈತ ಕಾರ್ಮಿಕರ ಕನಿಷ್ಟ ಕೂಲಿ ದರವನ್ನು ನಿಗದಿಪಡಿಸಿ ೧-೨-೧೯೮೫ ರಿಂದ ಜಾರಿಗೆ ಬರುವಂತೆ ಆಜ್ಞೆ ಹೊರಡಿಸಿದೆ.

iv) ಐಆರ್‌ಡಿಪಿ, ಆರ್‌ಎಲ್‌ಇಜಿಪಿ ಮತ್ತು ಎನ್‌ಆರ್‌ಇಪಿ ಯೋಜನೆಗಳಡಿಯಲ್ಲಿ ಸಣ್ಣ ಮತ್ತು ಅತಿ ಸಣ್ಣ ರೈತ ಮತ್ತು ಕೃಷಿ ಕಾರ್ಮಿಕರಿಗೆ ಸಾಕಷ್ಟು ಸಹಾಯಧನವನ್ನು ಪಡೆಯಲಿದ್ದಾರೆ.

ಉ) ಅನುಚ್ಛೇದ ಈ) ಉತ್ತರದಲ್ಲಿ ಸೂಚಿಸಿರುವಂತೆ ಸರ್ಕಾರವು ಈಗಾಗಲೇ ಸಾಕಷ್ಟು ಕ್ರಮಗಳನ್ನು ತೆಗೆದುಕೊಂಡಿರುತ್ತದೆ. ಇವು ರೈತರಿಗೆ ಮತ್ತು ರೈತ ಕಾರ್ಮಿಕರಿಗೆ ಸಹಾಯಕವಾಗಿರುತ್ತವೆ.

ತಖ್ತೆ — "ಎ"

೧೯೮೪, ೧೯೮೫ ಮತ್ತು ೧೯೮೬ನೇ ವರ್ಷಗಳಿಗೆ ಜಿಲ್ಲಾವಾರು ವಸ್ತಾವೂಲು, ವಾಸ್ತವಿಕ ಮತ್ತು ಶೇಕಡಾವಾರು ಮಳೆಯ ಪ್ರಮಾಣ

(ಮೀ. ಮೀಟರುಗಳಲ್ಲಿ)

ಕ್ರಮಸಂಖ್ಯೆ	ಜಿಲ್ಲೆ	೧೯೮೪			೧೯೮೫			೧೯೮೬		
		ವಸ್ತಾವೂಲು	ವಾಸ್ತವಿಕ	ಶೇಕಡಾವಾರು ಮಳೆಯ ಪ್ರಮಾಣ	ವಸ್ತಾವೂಲು	ವಾಸ್ತವಿಕ	ಶೇಕಡಾವಾರು ಮಳೆಯ ಪ್ರಮಾಣ	ವಸ್ತಾವೂಲು	ವಾಸ್ತವಿಕ	ಶೇಕಡಾವಾರು ಮಳೆಯ ಪ್ರಮಾಣ
೧	ಬೆಂಗಳೂರು	೭೯೩.೬	೬೯೨.೩	—೧೩	೭೯೩.೬	೫೧೮.೯	—೩೫	೭೯೩.೬	೯೧೦.೨	+೧೫
೨	ಬೆಳಗಾಂ	೭೮೪.೭	೬೩೪.೮	—೧೯	೭೮೪.೭	೫೩೬.೪	—೩೨	೭೮೪.೭	೫೯೫.೭	—೨೪
೩	ಬಳ್ಳಾರಿ	೫೭೪.೯	೫೪೩.೧	— ೬	೫೭೪.೯	೩೯೧.೦	—೩೨	೫೭೪.೯	೬೧೭.೨	+ ೭
೪	ಬೀದರ್	೯೦೭ ೫	೭೧೧.೬	—೨೨	೯೦೭.೫	೭೮೪.೯	—೧೪	೯೦೭.೫	೬೮೭.೭	—೨೪
೫	ಬಿಜಾಪೂರ	೫೫೨ ೮	೪೮೮.೪	—೧೦	೫೫೨.೮	೪೨೦ ೬	—೨೪	೫೫೨.೮	೫೧೦.೩	— ೮
೬	ಚಿಕ್ಕಮಗಳೂರು	೧೯೮೯.೮	೧೮೯೨.೫	— ೫	೧೯೮೯.೮	೧೫೨೪.೨	—೨೩	೧೯೮೯.೮	೧೫೧೪.೦	—೨೪
೭	ಚಿತ್ರದುರ್ಗ	೫೭೯.೩	೫೭೫.೫	— ೧	೫೭೯.೩	೪೦೯.೨	—೨೯	೫೭೯.೩	೬೪೧.೬	+೧೧
೮	ದಕ್ಷಿಣ ಕನ್ನಡ	೩೯೨೮.೪	೩೫೧೪.೯	—೧೧	೩೯೩.೪	೩೦೦೨.೫	—೨೪	೩೯೩೨.೪	೨೬೭೫.೧	—೩೨
೯	ಧಾರವಾಡ	೬೯೧.೧	೬೪೩.೨	— ೭	೬೯೧.೧	೪೯೬.೩	—೨೮	೬೯೧.೧	೬೭೭.೩	+ ೭
೧೦	ಗುಲ್ಬರ್ಗಾ	೭೦೨.೩	೮೨೧.೯	+೧೭	೭೦೨.೩	೬೬೬.೩	— ೫	೭೦೨.೩	೭೬೬.೮	— ೪
೧೧	ಹಾಸನ	೧೦೪೦.೭	೧೨೦೨.೪	+೧೬	೧೦೪೦.೭	೬೩೫ ೧	—೩೯	೧೦೪೦.೭	೯೭೭.೭	— ೬
೧೨	ಕೊಡಗು	೨೭೫೫.೫	೩೨೭೮.೨	+೧೩	೨೭೫೫.೫	೨೩೩೧.೭	—೧೪	೨೭೫೫.೫	೨೪೩೩.೨	—೧೧
೧೩	ಕೋಲಾರ	೭೩೦.೫	೬೬೬.೪	— ೯	೭೩೦.೫	೪೪೪.೩	—೩೨	೭೩೦.೫	೬೮೨.೪	— ೭
೧೪	ಮಂಡ್ಯ	೬೯೧.೨	೬೬೫.೩	— ೪	೬೯೧.೨	೪೮೯.೨	—೨೯	೬೯೧.೨	೮೫೯.೦	+೨೪
೧೫	ಮೈಸೂರು	೭೬೧.೯	೭೩೬.೬	— ೩	೭೬೧.೯	೫೮೩.೦	—೨೩	೭೬೧.೯	೬೫೫.೮	—೧೪
೧೬	ರಾಯಚೂರು	೬೦೧.೬	೪೦೩.೬	—೩೩	೬೦೧.೬	೫೫೮ ೫	— ೭	೬೦೧.೬	೫೫೬.೯	— ೭
೧೭	ಶಿವಮೊಗ್ಗ	೧೫೨೬.೩	೧೪೦೨.೪	— ೮	೧೫೨೬.೩	೧೦೭೪.೫	—೩೦	೧೫೨೬.೩	೧೧೮೧.೮	—೨೩
೧೮	ತುಮಕೂರು	೬೮೭.೯	೭೧೧.೧	+ ೩	೬೮೭.೯	೫೪೯.೮	—೨೦	೬೮೭.೯	೭೭೧.೩	+೧೨
೧೯	ಉತ್ತರ ಕನ್ನಡ	೨೭೬೪.೧	೨೫೯೬.೯	— ೬	೨೭೬೪.೧	೨೩೨೭.೧	—೧೬	೨೭೬೪.೧	೨೧೩೫.೦	—೨೬